**CC. No. 729/2024** **PW – 1**

<u>ದಿನಾಂಕಃ **11.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಸಾಕ್ಷಿಯು ತನಿಖಾದಿಕಾರಿಯವರಿಗೆ ಕೊಟ್ಟಂತಹ Redmi phone ಅನ್ನು ಈ ದಿನ ನ್ಯಾಯಾಲಯದಲ್ಲಿ On ಮಾಡಿ ಆಗ ಕೊಟ್ಟಂತಹ ಆರೋಪಿ ಕಳುಹಿಸಿದ್ದಂತಹ Whatsapp message ನ Screenshot ಗಳನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಆರೋಪಿ ಪರ ವಕೀಲರಿಗೂ ತೋರಿಸಲಾಯಿತು. ನಂತರ ದೋಷರೋಪಣಾ ಪಟ್ಟಿಯಲ್ಲಿ ಆ Screenshot ಗಳ ಪ್ರತಿಗಳನ್ನು ಹಾಕಿದ್ದು phone ಮತ್ತು ದೋಷರೋಪಣಾ ಪಟ್ಟಿಯಲ್ಲಿ ಇರುವ ಆ ಪ್ರತಿಗಳನ್ನು ತಾಳೆ ಮಾಡಿ ಸರಿ ಇದ್ದು ಆ Screenshot ಗಳನ್ನು ಪ್ರಕರಣ ಇತ್ಯರ್ಥ ಪಡಿಸಲು ಅನುಕೂಲವಾಗಲೆಂದು ನಿಶಾನೆಗೊಳಿಸಲಾಯಿತು. ಅವುಗಳನ್ನು ನಿ. ಪಿ. 9 ರಿಂದ 29 ಎಂದು ಗುರುತಿಸಲಾಯಿತು. ಆರೋಪಿ ಪರ ವಕೀಲರು ಈ Screenshot ಗಳಲ್ಲಿ ಕೇವಲ ಆರೋಪಿ ಕಳುಹಿಸಿದ Message ಗಳು ಮಾತ್ರ ಇರುವುದರಿಂದ ಆ ತಕರಾರಿಗೆ ಒಳಪಟ್ಟು ಗುರುತಿಸಲು ತಿಳಿಸಿರುತ್ತಾರೆ. ಸಾಕ್ಷಿಯು ಆ ತಕರಾರಿಗೆ ಅವರ ಕಡೆಯಿಂದ ಯಾವುದೇ reply ಮಾಡಿರುವುದಿಲ್ಲ ಎಂದು ಹೇಳಿದ್ದು, ಆದ್ದರಿಂದ ಕೇವಲ ಆರೋಪಿಯ Message ಗಳು ಮಾತ್ರ ಇರುತ್ತವೆ ಎಂದು ಹೇಳಿರುತ್ತಾರೆ. Redmi ಮೊಬೈಲ್ ಅನ್ನು ಮು. ಮಾ 1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್ ಎನ್ . ವಕೀಲರಿಂದಃ</u>

ಆರೋಪಿ ಮತ್ತು ನಾನು live in relationship ನಲ್ಲಿಇದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸ್ನೇಹಿತರಾದ ಮುತ್ತಮ್ಮನವರ ಜೊತೆ ಬೆಂಗಳೂರಿಗೆ ಕೆಲಸ ಹುಡುಕಲು ಹೋಗಿದ್ದೆ. ಬೆಂಗಳೂರಿನ ಮಾರತಹಳ್ಳಿಪಿ ಜಿಯಲ್ಲಿ 2017 ನವೆಂಬರ್ ರಿಂದ 2022 ರವರೆಗೂ ಇದ್ದೆವು. 2017 ರಿಂದ ಕೆಲಸ ಹುಡುಕಿದ್ದು 2018 ಮೇ ನಲ್ಲಿ Accenture ನಲ್ಲಿ ಕೆಲಸ ಸಿಕ್ಕಿರುತ್ತದೆ.

2017 ರಿಂದ ಕೆಲಸ ಸಿಗುವವರೆಗೂ ಆರೋಪಿ ಪರಿಚಯವಾಗಿದ್ದ. ಬೆಂಗಳೂರಿನ tech hub ಆದ ITPL Techno park ನಲ್ಲಿ ಸಿಕ್ಕಿರುತ್ತಾನೆ. ಆರೋಪಿ ಹೀಗೆ ಪರಿಚಯಮಾಡಿಕೊಂಡು ನನಗೆ ಹೆಚ್ ಆರ್ ಗಳು ಪರಿಚಯವಿದ್ದಾರೆ ಎಂದು ಹೇಳಿರುತ್ತಾನೆ. ನನ್ನ ಜೊತೆ ಬಂದಂತಹ ನನ್ನ ಸ್ನೇಹಿತೆ ಆರೋಪಿ ಪರಿಚಯವಾದಾಗ ಇರಲಿಲ್ಲ. ಪರಿಚಯವಾದಾಗ ಆರೋಪಿ ಒಬ್ಬನೇ ಇದ್ದ. ಆರೋಪಿ ಆಗ ಎಲ್ಲಿ ವಾಸವಾಗಿದ್ದ ಎಂದು ನೆನಪಿಲ್ಲ. ಮಾರತಹಳ್ಳಿ ಪಿ ಜಿ ಆದ ನಂತರ BTM Layout ನಲ್ಲಿ ಇನ್ನೊಂದು ಪಿ ಜಿ ನನ್ನ ಸ್ನೇಹಿತೆ ಜೊತೆ ಇದ್ದೆ. ಆರೋಪಿಯು BTM Layout ನಲ್ಲಿ ಇದ್ದ ಎಂದರೆ ನೆನಪಿಲ್ಲ.

2017 ರಲ್ಲಿ ಆರೋಪಿ ಕೆಲಸ ಕುಡಿಸುವುದಾಗಿ ಹೇಳಿದ್ದು ನಾನು ನನ್ನ resume ಅನ್ನು ನನ್ನ E - mail ನಿಂದ ಅವರ E - mail ಗೆ ಕಳುಹಿಸಿದ್ದೆ. ನನ್ನ ಸ್ನೇಹಿತೆಯ resume ಅನ್ನು ಆರೋಪಿಗೆ ಕಳುಹಿಸಿರುವುದಿಲ್ಲ, ಡಿಸೆಂಬರ್ 2017 ರ ವೇಳೆಗೆ ಅವಳಿಗೆ ಕೆಲಸ ಸಿಕ್ಕಿತ್ತು. ಅಕ್ಟೋಬರ್ ನವೆಂಬರ್ 2017 ರ ಸುಮಾರಿಗೆ ಆರೋಪಿ ಸಿಕ್ಕಿರುತ್ತಾನೆ. ಈ ರೀತಿ ಪರಿಚಯವಾಗಿದ್ದು ನಾನು ಮತ್ತು ಆರೋಪಿ whatsapp ನಲ್ಲಿ ಸಕ್ರಿಯವಾಗಿದ್ದೆವು ಎಂದರೆ ಆಗಾಗ ಕೆಲಸದ ವಿಚಾರವಾಗಿ ನಾನು ಮಾಡುತ್ತಿದದೆ. ಈ whatsapp message ಗಳು ನನ್ನ phone ನಲ್ಲಿ ಮತ್ತು ದೋಷರೋಪಣಾ ಪಟ್ಟಿಯಲ್ಲಿ ಇಲ್ಲ ಎಂದರೆ ಸರಿ, ಆರೋಪಿಯು ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ನನಗೆ ಹೇಳಿರಲಿಲ್ಲ. US Indian ಎಂಬ company ಯ ಹೆಸರಿನಲ್ಲಿ ಕೆಲಸ ಮಾಡುವುದಾಗಿ ಆರೋಪಿ ತಿಳಿಸಿದ್ದ. White field ನಲ್ಲಿ, ಜಯನಗರ ಮತ್ತು Electronic city ಗಳಲ್ಲಿ ಕೆಲಸ ಹುಡುಕಿದ್ದೆ. ಆರೋಪಿ ಕಡೆಯಿಂದ ಕೆಲಸ ಸಿಗುವ ಯಾವುದೇ ಮಾಹಿತಿ ಬರಲಿಲ್ಲ.

ಆರೋಪಿಯು ನನ್ನಿಂದ 1 ಲಕ್ಷಕ್ಕಿಂತ ಹೆಚ್ಚಾಗಿ ಹಣ ಪಡೆದಿದ್ದು ಹಿಂದಿರುಗಿಸಿರುವುದಿಲ್ಲ, ಆದ್ದರಿಂದ ಮನಸ್ತಾಪವಾಯಿತು. ಹಣ ಕೊಟ್ಟಿರುವ ಬಗ್ಗೆ ದಾಖಲೆ ದೋಷರೋಪಣಾ ಪಟ್ಟಿಯಲ್ಲಿ ಇಲ್ಲ ಎಂದರೆ ಸರಿ. ಆರೋಪಿಯ ಬ್ಯಾಂಕ್ ಖಾತೆ ಯಾವುದೋ ಕಾರಣಕ್ಕೆ ಲಾಕ್ ಆಗಿದೆ ಎಂದು ಹೇಳಿ ನನ್ನ ಬ್ಯಾಂಕ್ ಖಾತೆಯಿಂದಲೇ ನಾನು ಹಣವನ್ನು ಡ್ರಾ ಮಾಡಿ ಮತ್ತು ಲೋನ್ ಆಪ್ ಮೂಲಕ ಸಾಲ ಪಡೆದು ಆರೋಪಿಗೆ ನಗದು ಹಣ ಕೊಟ್ಟಿರುತ್ತೇನೆ. ಲೋನ್ ಆಪ್ ಮೂಲಕ ಕೊಟ್ಟ ಬಗ್ಗೆ ದಾಖಲೆ ಇದೆ ಅದನ್ನು ಪೊಲೀಸರಿಗೆ ಕೊಡಲಿಲ್ಲ. ಲೋನ್ ಆಪ್ ನಿಂದ ತೆಗೆದ ರೂ. 25,000/- ಹಣ Kishtearly salary loan ಆಪ್ ಮತ್ತು ಆತನ account ಸರಿ ಹೋಗಿದ್ದು G – pay ಮೂಲಕವು ಸಹ ಮಾಡಿದ್ದೇನೆ. ಲೋನ್ ಆಪ್ ಸಾಲ ನನ್ನ ಖಾತೆಗೆ ಬಂದು ಆರೋಪಿಗೆ ಫೋನ್ ಮೂಲಕ ಕಳುಹಿಸಿದೆ. ನನಗೆ IDFC and HDFC bank ಗಳಲ್ಲಿ ಖಾತೆ ಇದೆ. ನಾನು ಆರೋಪಿಯಿಂದ ಯಾವುದೇ ಸಾಲ ಪಡೆದಿಲ್ಲ, ಆತನೇ ಕೊಡಬೇಕಾಗಿದೆ. ಆರೋಪಿ 6 ಲಕ್ಷ ಹಣ ನನ್ನ SBI Bank ಖಾತೆಗೆ ಮತ್ತು 1 ಲಕ್ಷ ಹಣ ನನ್ನ HDFC bank ಖಾತೆಗೆ ಕಳುಹಿಸಿದ್ದು ದಾಖಲೆ ಇದೆ ಎಂದರೆ ಸರಿಯಲ್ಲ. ಈ ಹಣವನ್ನು ಹಿಂದಿರುಗಿಸಬೇಕಾಗುತ್ತದೆ ಎಂದು ನಾನು ಆತನ ಫೋನ್ ನಂಬರ್ ಅನ್ನು ಬ್ಲಾಕ್ ಮಾಡಿ ಸ್ನೇಹವನ್ನು ಕಳೆದುಕೊಂಡು ಈ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಂತರ ಬೆಂಗಳೂರಿನನಿಂದ ಪೊನ್ನಂಪೇಟೆಗೆ ಖಾಯಂ ಆಗಿ shift ಆದೆ ಎಂದರೆ ಸರಿಯಲ್ಲ. 2023 ರಲ್ಲಿ ನನ್ನ ಮದುವೆ ಆಯಿತು. ಆರೋಪಿಯನ್ನು ತಿರಿಸ್ಕರಿಸಿ ಆತನಿಗೆ ಹಣಕಾಸಿನ ಮೋಸ ಮಾಡಿ ನಾನು ಪೊನ್ನಂಪೇಟೆಗೆ ಬಂದು ಚಾಸಾ 2 ರವರ ಜೊತೆ ಮದುವೆಯಾಗಿ ಆರೋಪಿಗೆ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ನಾನು ಹಣ ಕೊಡಬೇಕಾದ ಕಾರಣಕ್ಕೆ ಆರೋಪಿಯು Whatsapp message ಗಳಲ್ಲಿ ಹಣ ವಾಪಸ್ ಕೇಳುತ್ತಿದ್ದ ಎಂದರೆ ಸರಿಯಲ್ಲ, ಆರೋಪಿಯು ನನಗೆ ಕೊಡಬೇಕಾದ ಹಣದಲ್ಲಿ ಒಂದು ಲಕ್ಷ ಹಣತೀರಿಸಿದ್ದು ನನ್ನ ಗಂಡನಿಗೆ ನಾನು ಹಣ ವಾಪಸ್

ಆರೋಪಿಗೆ ಕೊಡಬೇಕಾಗಿದೆ ಎಂದು ಹೇಳಿ ಸುಳ್ಳು ಹೇಳಿ ನಂಬಿಸುವ ಪ್ರಯತ್ನ ಮಾಡಿದ್ದು ಅದರಂತೆ ಆ ರೀತಿ message ಮಾಡುತ್ತಿದ್ದ. ನನ್ನ ಗಂಡನಿಗೆ ನಂಬಿಸಿ ಹಣ ನಾನು ತೆಗೆದುಕೊಂಡ ಬಗ್ಗೆ ಯಾವುದೇ message ಗಳು ಇಲ್ಲ ಎಂದರೆ ಸರಿಯಲ್ಲ. CEN ಪೊಲೀಸರು ಆರೋಪಿಯ ಯಾವುದೇ Message ಗೆ ಪ್ರತ್ಯುತ್ತರ ನೀಡಬೇಡಿ ಎಂದು ಹೇಳಿದ್ದು ನಾನು ಅದರಂತೆ ಆರೋಪಿಗೆ ಯಾವುದೇ ಹಣ ತೀರಿಸುವುದಾಗಿ ಇಲ್ಲ ಎಂಬ message ಅನ್ನು ಕಳುಹಿಸಿರುವುದಿಲ್ಲ.

ಈ ಹಂದತಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ